ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಹೆಬ್ಬೂರು ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **11.08.15**

ಈ ವಾರದ ಮುನ್ಸೂಚನೆ **(12-08-15 to 16.08.15 ವರೆಗೆ)**

ನಿಯತಾಂಕಗಳು	12/8/15/	13/8/15	14/8/15	15/8/15	16/8/15
ಮಳೆ (ಮಿ ಮಿ)	0	3	4	2	4
ಗರಿಷ್ಠ ಉಷ್ಣಾಂಶ(ಡಿ.ಸೆ.)	29	29	31	31	32
ಕನಿಷ್ಠ ಉಷ್ಣಾಂಶ (ಡಿ.ಸೆ.)	20	19	20	20	20
ಮೋಡ (ಪ್ರಮಾಣ)	7	6	6	5	4
ಆರ್ದ್ರತೆ ೭.೨೦ ಬೆ (ಶೇ)	94	97	89	91	97
ಆರ್ದ್ರತೆ ೨.೨೦ ಮ (ಶೇ)	60	57	43	44	44
ಗಾಳಿಯ ವೇಗ (ಕಿ.ಮಿ/ಗಂಟೆಗೆ)	22	12	16	16	16
ಗಾಳಿಯ ದಿಕ್ಕು (ಡಿಗ್ರಿ)	252	287	291	291	292

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಹೆಬ್ಬೂರು ಹಾಗೂ ಸುತ್ತಮುತ್ತ ಐದು ದಿನಗಳಲ್ಲಿ ಹಗುರವಾದ ಮಳೆಯ ನಿರೀಕ್ಷೆಯಿದೆ. ಉಳಿದಂತೆ ಮೋಡ ಕವಿದ ವಾತಾವರಣ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು **29-31.0°C** ಮತ್ತು ಕನಿಷ್ಠ **19-21°C** ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **89-97%** ಇದ್ದು, ಮಧ್ಯಾಹ್ನ **43-60%** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **12-22** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಅಲ್ಪಾವಧಿ ತಳಿಗಳನ್ನು ಬಿತ್ತನೆ ಮಾಡಬಹುದು.

ಬೆಳೆ ಹಾಗೂ ತಳಿಗಳು:

ಜುಲೈ–ಆಗಸ್ಟ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು:

ರಾಗಿ: **ರಾಗಿ:** ಜಿ.ಪಿ.ಯು–28, ಹೆಚ್.ಆರ್.–911, ಇಂಡಾಫ್ಲ್–೨೮, ಎಮ್.ಎಲ್–೩೬೫, ಎಮ್.ಆರ್–೧, ೨, ೬.

ಪಾಪ್‌ಕಾರ್ನ್: ಅಂಬರ್. **ಅಲಸಂದೆ:** ಟಿ.ವಿ.ಎಕ್ಸ್–೯೪೪, ಕೆ.ಎಮ್–5, ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಸೂರ್ಯಕಾಂತಿ: ಮಾರ್ಡೆನ್, ಹೆಬ್ರಿಡ್ ತಳಿಗಳು:ಕೆ.ಬಿ.ಎಸ್.ಎಚ್–1, 41, 42, 44, 53.

ತುಮಕೂರಿನ ಕೆಲವು ಭಾಗಗಳಲ್ಲಿ, ಮೊದಲನೇ ಬೆಳೆಗಳಾದ ನೆಲಗಡಲೆ ಮತ್ತು ಜೋಳ ಕೊಯ್ಲಾದ ನಂತರ ಆಗಸ್ಟ್ ತಿಂಗಳಲ್ಲಿ ರಾಗಿ ಅಥವಾ ಅಲಸಂದೆ ಬೆಳೆಗಳನ್ನು ಬಿತ್ತನೆ ಮಾಡಬಹುದು.

ಬಿತ್ತನೆಗೆ ಬೇಕಾಗುವ ಬೀಜಗಳನ್ನು **ಜಿ.ಕೆ.ವಿ.ಕೆಯಿಂದ ಅಥವಾ ರೈತ ಸಂಪರ್ಕ ಕೇಂದ್ರದಿಂದ ಖರೀದಿಸಿ ಇಟ್ಟುಕೊಳ್ಳಬೇಕು. ಅಲ್ಪಾವಧಿ ಬೆಳೆಗಳಾದ ಎಳ್ಳು, ಅಲಸಂದೆ, ಸಜ್ಜೆ, ಉದ್ದು, ಹೆಸರು ಬೆಳೆಗಳನ್ನು ಬೆಳೆಯಬಹುದು**

ಸಸ್ಯ ಸಂರಕ್ಷಣೆ:

- ✓ **ರಸ ಹೀರುವ ಕೀಟಗಳು:** ಇವುಗಳ ಹತೋಟಿಗೆ ಶೇ. 4ರಷ್ಟು ಬೇವಿನ ಕಷಾ0ಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು. ನೀರನ್ನು ರಭಸವಾಗಿ ಸಿಂಪಡಣೆ ಮಾಡುವುದರಿಂದಲೂ ಏಫಿಡ್ಸ್ (ಹೇನುಗಳು) ಹಾಗೂ ಇನ್ನಿತರೆ ರಸಹೀರುವ ಕೀಟಗಳನ್ನು ಹತೋಟಿಯಲ್ಲಿಡಬಹುದು. ಅಂಟು ದ್ರಾವಣವನ್ನು ಲೇಪಿಸಿದ ಹಳದಿ ಬಣ್ಣದ ಅಂಟು ಬಲೆಗಳನ್ನು ಅಲ್ಲಲ್ಲಿ ಇಡುವುದರಿಂದ ಬಿಳಿನೊಣ, ರೆಕ್ಕೆ ಇರುವ ಏಫಿಡ್ಸ್ ಹಾಗೂ ಇನ್ನಿತರೆ ಕೀಟಗಳು ಆಕರ್ಷಣೆಗೊಂಡು ಆ ಬಲೆಗೆ ಅಂಟಿಕೊಳ್ಳುತ್ತವೆ.
- ✓ ದಾಳಿಂಬೆ: **ಅಂಗಮಾರಿ ರೋಗಕ್ಕೆ ಸ್ಟ್ರೆಪ್ಟೋಸೈಕ್ಲಿನ್ (೦.೫ಗ್ರಾಂ) + ಕಾಪರ್ ಆಕ್ಸಿ ಕ್ಲೋರೈಡ್ (೨.೫ ಗ್ರಾಂ) ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಬೆಳ್ಳುಳ್ಳಿ ಕಷಾಯ ಕೂಡ ಬ್ಯಾಕ್ಟೀರಿಯನಾಶಕ ಗುಣವನ್ನು ಹೊಂದಿದೆ.**

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು